# ‘ಸತ್ಯಕ್ಕೆ ಅಪಚಾರ ಮಾಡುವುದು ಸಂಶೋಧನೆ ಆಗಲಾರದು...

**ಮಂಡ್ಯದಲ್ಲಿ ನಡೆಯಲಿರುವ (ಡಿ. 20ರಿಂದ 22ರವರೆಗೆ) ಎಂಬತ್ತೇಳನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗೊ.ರು. ಚನ್ನಬಸಪ್ಪ ಅವರೊಂದಿಗೆ ಮಾತುಕತೆ.**

■ ರಾಘವೇಂದ್ರ ಕೆ. ತೊಗರ್ಸಿ
ಫೋಟೊಗಳು: ಪ್ರಶಾಂತ್ ಎಚ್‌.ಜಿ.



◆ **ಸರ್, ನಮಸ್ಕಾರ. 87ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿರುವ ನಿಮಗೆ ‘ಸುಧಾ’ ಬಳಗದ ಅಭಿನಂದನೆಗಳು. ಈಗ ನಿಮ್ಮ ಆರೋಗ್ಯ ಹೇಗಿದೆ?**

ಧನ್ಯವಾದಗಳು. ಇದೆಲ್ಲ ಒಪ್ಪುವ ವಯಸ್ಸಲ್ಲ ಎಂದು ಮೊದಲೇ ಹೇಳಿದ್ದೆ. ಆದರೆ ತೀರ್ಮಾನವನ್ನು ಒಂದು ಸಂಸ್ಥೆ ಮಾಡಿದೆ ಎಂದು ಒಪ್ಪಿದ್ದೇನೆ. ಶಬ್ದ ಆಘಾತದಿಂದ ಸ್ಮರಣಶಕ್ತಿ ಮತ್ತು ಶ್ರವಣಶಕ್ತಿ ನಷ್ಟವಾಯಿತು. ಈಗ ಬರೆಯಲು ಆಗುವುದಿಲ್ಲ. ದೀರ್ಘವಾಗಿ ಮಾತನಾಡುವುದು ಸ್ವಲ್ಪ ಕಷ್ಟ ಆಗುತ್ತದೆ.

◆ **ಚಳವಳಿಯ ಮುಂದಾಳಾಗಿದ್ದವರು, ಸಂಘಟಕರಾಗಿದ್ದವರು. ಕನ್ನಡ ನುಡಿ ತೇರಿನ ಸಾರಥಿಯಾಗಿದ್ದೀರಿ. ರಥ ಸಾಗಬೇಕಾದ ಪಥದ ಬಗ್ಗೆ ಆಶಯ ನುಡಿಯ ಮುಖ್ಯಾಂಶವೇನು?**

ರಥದ ಸಾರಥಿ ಎಂದು ಹೇಳಲಾರೆ. ರಥವನ್ನು ಒಂದಿಷ್ಟು ದೂರ ಎಳೆದಿದ್ದೇನೆ. ಕಾರ್ಯದರ್ಶಿಯಾಗಿ, ಅಧ್ಯಕ್ಷನಾಗಿ ಸಂಸ್ಥೆಯ ಕೆಲಸ ಮಾಡಿದ್ದೇನೆ ಎನ್ನುವ ಸಮಾಧಾನ ನನಗಿದೆ. ಪಂಚಾಯತ್ ರಾಜ್ ಪತ್ರಿಕೆಯ ಸಂಪಾದಕನಾಗಿದ್ದರಿಂದ ಬೆಂಗಳೂರಿಗೆ ಬರಬೇಕಾಯಿತು. ಕನ್ನಡ ಸಾಹಿತ್ಯ ಪರಿಷತ್ತು ಸಂಪರ್ಕಕ್ಕೆ ಬಂತು. ಆಗ ಜಿ. ನಾರಾಯಣ ಅಧ್ಯಕ್ಷರಾಗಿದ್ದರು. ನಾಗೇಗೌಡರ ಪರಿಚಯ ಮೊದಲೇ ಇತ್ತು. ಹಾಗಾಗಿ ಪರಿಷತ್ತಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಸಿಕ್ಕಿತು. ಪರಿಷತ್ತಿನ ಜಾನಪದ ವಿಭಾಗದ ಸಂಚಾಲಕನಾದೆ. ಜಿ.ಎಸ್. ಸಿದ್ದಲಿಂಗಯ್ಯ ಅವರು ಅಧ್ಯಕ್ಷರಾಗಿದ್ದಾಗ ಕಾರ್ಯದರ್ಶಿಯಾಗಿದ್ದೆ. ಆಮೇಲೆ ನಾನೇ ಅಧ್ಯಕ್ಷ ಆಗುವ ಅವಕಾಶ ಬಂತು.

ಕನ್ನಡದ ತೇರಿನ ಆಶಯ ಎಂದರೆ, ಕನ್ನಡಿಗರಿಗೆ ನೆಮ್ಮದಿ ಬದುಕು ಸಿಗಬೇಕು.